



**ಮೇಷ್ಟು:** ಡಾಕ್ಟರ್ ನಿಂಗೆ ಆಹಾರ ಪದ್ಧತಿ, ಜೀವನ ಶೈಲಿನ ಬದಲಾಯಿಸಿಕೊಳ್ಳಕ್ಕೆ ಹೇಳಿದ್ರಂತಲ್ವ, ಅವ್ರು ಹೇಳ್ದಂಗೆ ಎಲ್ಲಾನು ಬದಲಾಯಿಸಿಕೊಂಡ್ಯೇನೊ?
**ಗುಂಡ:** ಇಲ್ಲ ಮೇಷ್ಟೆ ಡಾಕ್ಟರ್ ಅನ್ನೇ ಬದಲಾಯಿಸಿಬಿಟ್ಟೆ.

**ಗಂಡ:** ನನ್ನ ಅಕ್ಕ ತಂಗೀರು ಎಷ್ಟು ದೂರದ ಊರಿಂದ ನನ್ನನ್ನು ನೋಡಲು ಬರ್ತಿದ್ದಾರಂತೆ. ನೋಡೆ ಅವ್ರಿಗೆಲ್ಲಾ ನನ್ನ ಕಂಡ್ರೆ ಎಷ್ಟೊಂದು ಪ್ರೀತಿ, ಏನಾದ್ರು ಸಿಹಿ ಮಾಡೆ.
**ಹೆಂಡ್ತಿ:** ಕಂಡಿದ್ದೀನಿ ಸುಮ್ಮನಿರಿ, ಇಷ್ಟು ವರ್ಷ ಇಲ್ದಿರೊ ಪ್ರೀತಿ ಈಗ ಹೇಗ್ ಬರುತ್ತೆ. ಬಸ್ ಟಿಕೆಟ್ ಫ್ರೀ ಅಂತ ಬರ್ತಿದ್ದಾರಷ್ಟೆ.
**ಗಂಡ:** ಮೊನ್ನೆ, ಹತ್ತಾರು ವರ್ಷಗಳ ಬಳಿಕ ನೀನೂ ನಿನ್ನ ಅಣ್ಣ–ತಮ್ಮನ ಮನೆಗೆ ಹೋಗಿದ್ದೂ ಅದ್ಕೆನಾ?
**ಹೆಂಡ್ತಿ:** ಹಾಗೆ ಅಂದ್ಕೊಳ್ಳಿ.
**ಗಂಡ:** ಹೋಗ್ಲಿ ಬಿಡು. ಅವ್ರು ಭಾನುವಾರ ಬರ್ತಾರೆ. ಏನಾದ್ರೂ ಹಬ್ಬದೂಟ ಮಾಡಿ ಬಡ್ಸೆ.
**ಹೆಂಡ್ತಿ:** ನಂಗು ಬಸ್ ಟಿಕೆಟ್ ಫ್ರೀ. ನಾನು ಹಬ್ಬದೂಟಕ್ಕಂತ ಭಾನುವಾರನೇ ನಮ್ಮಣ್ಣನ ಮನೆಗೆ ಹೋಗ್ತಿದ್ದೀನಿ. ನೀವೇ ಮಾಡ್ಕೊಳ್ಳಿ.

**ಗಂಡ:** ನಾನು ಕೊಡಿಸಿದ ಸೀರೆಯಲ್ಲಿ ಎಷ್ಟು ಸಣ್ಣಗೆ, ಉದ್ದಕ್ಕೆ ಚೆನ್ನಾಗಿ ಕಾಣಿಸುತ್ತಿದ್ದೀಯಾ ಕಣೆ.
**ಹೆಂಗಸು:** ಮುಂದೆ ಬಂದು ನೋಡಿ ಸಾಹೇಬ್ರೆ ನಾನು ಅಮ್ಮ ಅಲ್ಲ ನಿಂಗಮ್ಮ.


**ಇನ್‌ಸ್ಪೆಕ್ಟರ್:** ಲಂಚದ ಬಗ್ಗೆ ನಿಮ್ಮ ಮೇಷ್ಟು ಏನು ಹೇಳಿಕೊಟ್ಟಿದ್ದಾರೆ ಗುಂಡ?
**ಗುಂಡ:** ಲಂಚ ತೊಗೊಂಡ್ರೆ ಒಳ್ಗೆ ಹಾಕ್ತಾರೆ, ಕೊಟ್ರೆ ಹೊರ್ಗೆ ಬಿಡ್ತಾರೆ ಅಂತ ಸರ್!

**ಮೇಷ್ಟು:** ಯಾಕೊ ಗುಂಡ ರಾತ್ರಿಯೆಲ್ಲಾ ನಿದ್ದೆ ಬರಲ್ಲ ಅಂತ ಒದ್ದಾಡ್ತಾ ಇರ್ತಿಯಂತೆ?
**ಗುಂಡ:** ರಾತ್ರಿ ಹೊತ್ತು ಮನೆಗೆ ಬಂದು ಯಾವ ಮೇಷ್ಟೂ ಪಾಠ ಮಾಡಲ್ವಲ್ಲ, ಅದ್ಕೆ.

**ರಂಗ:** ನಿನ್ನ ಹೆಂಡ್ತಿ ಯೂಟ್ಯೂಬ್‌ನಲ್ಲಿ ಎಷ್ಟು ಚೆನ್ನಾಗಿ ರೊಟ್ಟಿ ಮಾಡ್ತಾರೆ. ಆ ವಿಡಿಯೊವನ್ನು ನಾನೂ ನೋಡಿದ್ದೀನಿ. ನಂಗೂ ಒಂದಿನ ರೊಟ್ಟಿ ಮಾಡಿಸಿಕೊಡೊ, ತಿನ್ಬೇಕು ಅನಿಸ್ತಿದೆ.
**ಗುಂಡ:** ಅದು ನೋಡೋಕೆ ಮಾತ್ರ ಚೆನ್ನಾಗಿರತ್ತೆ, ತಿನ್ನಕ್ಕಲ್ಲ. ಬೇಕು ಅಂದ್ರೆ ಹೇಳು ತಂದ್ ಕೊಡ್ತೀನಿ.

**ಗಂಡ:** ಯಾಕೆ ಮಗನಿಗೆ ದನಕ್ಕೆ ಬಡಿದ ಹಾಗೆ ಬಡಿತಿದ್ಯಾ?
**ಹೆಂಡ್ತಿ:** ನೀವು ನಂಗೆ ದನಕ್ಕೆ ಬಡಿದಾಗ ಬಡಿತಿದ್ರೆ, ನೋಡ್ಕೊಂಡು ಸುಮ್ಮನೆ ದನ ಕೂತಂಗೆ ಕೂತಿದ್ನಲ್ಲ, ಅದ್ಕೆ ಕಣ್ರಿ.

**ಹೆಂಡತಿ:** 'ನಂಗೆ ತಂಗಿ ಅಂದ್ರೆ ತುಂಬಾ ಇಷ್ಟ. ಅವಳಿಗೋಸ್ಕರ ಪ್ರಾಣ ಕೊಡ್ತೀನಿ, ಸರ್ವಸ್ವವನ್ನು ಕೊಡ್ತೀನಿ' ಅಂತೀರ. ನಿಮ್ಗೆ ತಂಗೀನೆ ಇಲ್ವಲ್ರೀ?
**ಗಂಡ:** ನಿನ್ನ ತಂಗಿಗೆ ಕಣೆ, ನಾ ಹೇಳಿದ್ದು.




**ಅಪ್ಪ:** ಏನ್ ಪಾಪ ಮಾಡಿ ನಿನ್ನಂಥ ಮಗನನ್ನ ಪಡೆದ್ನೋ... ಯಾವಾಗಲೂ ಹೊರಗಡೆ ಹೋಗಿ ಕುಡಿತೀಯಾ...
**ಮಗ:** ಮನೆಯಲ್ಲೇ ಒಂದು ಮಿನಿ ಬಾರ್ ಇಟ್ಟುಕೊಡಕ್ಕೆ ಆಗದಿರೊ ನಿನ್ನಂಥ ಅಪ್ಪನ್ನ ಪಡೆಯೋಕೆ ನಾನೆಂತಹ ಮಹಾ ಪಾಪ ಮಾಡಿದ್ನೊ ನಾ ಕಾಣೆ.

**ಗಂಡ:** ಚಪಾತಿನಾ ಯಾಕಿಷ್ಟು ಕೆಟ್ಟದಾಗಿ ಮಾಡ್ತೀಯಾ?
**ಹೆಂಡ್ತಿ:** ಇಷ್ಟು ಕೆಟ್ಟದಾಗಿ ಮಾಡಿದ್ರೂ 10 ಚಪಾತಿ ತಿನ್ತೀರ. ಇನ್ನು ಚೆನ್ನಾಗಿ ಮಾಡಿದ್ರೆ ಎಷ್ಟು ತಿನ್ತೀರೊ, ಅದ್ಕೆ ಕಣ್ರಿ.

ಸಂಗ್ರಹ: ಬಿ.ಆರ್. ಉಷಾ, ಬೆಂಗಳೂರು